ರೋಗಿಯ ಸ್ಥಿತಿ ಆಶಾದಾಯಕವಾಗಿಲ್ಲವಾದ್ದರಿಂದ ಅಲ್ಲಿ ಚಿಕಿತ್ಸೆ ಕೊಟ್ಟು ಹೆಚ್ಚಿನ ಚಿಕಿತ್ಸೆಗೋಸ್ಕರ ದೊಡ್ಡ ಆಸ್ಪತ್ರೆಗೆ ತೆಗೆದುಕೊಂಡು ಹೋಗಬೇಕೆಂದು ಸಲಹೆ ಮಾಡಿದರು.

ಮೈಸೂರಿನ ಆಸ್ಪತ್ರೆಗೆ ತೆಗೆದುಕೊಂಡು ಹೋಗುವಾಗ ಹಾದಿಯಲ್ಲಿ ರೋಗಿಯು ಮೃತಪಟ್ಟಳು. ಅಕ್ರಮ ಗರ್ಭಪಾತಕ್ಕೆ ಪ್ರೇರೇಪಿಸಿರುವುದರಿಂದ ಖಾಸಗಿ ವೈದ್ಯರಾದ ಶ್ರೀ ಹೆಚ್.ಆರ್. ಮುದ್ದಣ್ಣ ಎಂಬುವವರನ್ನು ದಸ್ತಗಿರಿ ಮಾಡಲು ಪೋಲೀಸಿನವರು ಮುಂದಿನ ಕ್ರಮ ತೆಗೆದುಕೊಂಡಿದ್ದಾರೆ. ಈ ಹೇಳಿಕೆಯಲ್ಲಿ ಆ ವೈದ್ಯರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ ಅಂತ ಇದೆ. ಈಗ ಆ ವೈದ್ಯರನ್ನು ದಸ್ತಗಿರಿ ಮಾಡಿದ್ದಾರೆಂದು ಹೇಳುತ್ತೇನೆ.

ಅಧ್ಯಕ್ಷರು.—ಕ್ಲಾರಿಫಿಕೇಷನ್ ಏನಾದರೂ ಕೇಳುತ್ತೀರಾ ?

ಶ್ರೀ ಜಿ.ಕೆ. ಸುಬ್ಬಯ್ಯ.—ಏನೂ ಇಲ್ಲ.

೫. ಶಾಸನ ರಚನೆಯ ಕಾರ್ಯಕಲಾಪಗಳು

ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಹಾಗೂ ರೇಷ್ಮೆ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ೧೯೮೪ನೇ ಇಸವಿಯ ಕರ್ನಾಟಕ ರೇಷ್ಮೆ ಹುಳು ಮೊಟ್ಟೆ, ರೇಷ್ಮೆ ಗೂಡು ಹಾಗೂ ರೇಷ್ಮೆ ನೂಲು (ಉತ್ಪಾದನೆ ಸರಬರಾಜು ವಿತರಣೆ ಹಾಗೂ ವ್ಯಾಪಾರ ನಿಯಂತ್ರಣ) (ತಿದ್ದುಪಡಿ) ವಿಧೇಯಕದ ಬಗ್ಗೆ ಇನ್ನು ಒಂದೆರಡು ತಿದ್ದುಪಡಿಗಳನ್ನು ಮಾಡಬೇಕಾಗಿದೆ. ಇನ್ನೂ ಅದು ರೆಡಿಯಾಗಿಲ್ಲ, ಆದ್ದರಿಂದ ಇದಕ್ಕೆ ನನಗೆ ಕಾಲಾವಕಾಶ ಕೊಡಬೇಕೆಂದು ನಾನು ಸೂಚಿಸುತ್ತೇನೆ.

ಅಧ್ಯಕ್ಷರು.—ಆಗಬಹುದು.

೧) ೧೯೮೪ನೇ ಇಸವಿಯ ಬೆಂಗಳೂರು ನೀರು ಸರಬರಾಜು ಹಾಗೂ ಗ್ರಾಮಸಾರಕ್ಕೆ ಸಂಬಂಧಿಸಿದ ವಿಧೇಯಕ

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ನಾನು ೧೯೮೪ನೇ ಇಸವಿಯ ಬೆಂಗಳೂರು ನೀರು ಸರಬರಾಜು ಹಾಗೂ ಗ್ರಾಮಸಾರಕ್ಕೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಗಿದೆ

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಉಪಾಧ್ಯಕ್ಷರೇ, ನಾನು ಸೆಕ್ಷನ್ ೨೫ಕ್ಕೆ ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಮತ್ತು ಸೆಕ್ಷನ್ ೩೩ಕ್ಕೆ ಎರಡು ತಿದ್ದುಪಡಿಯನ್ನು ತಂದಿದ್ದೇನೆ. ಮೊದಲನೆಯದಾಗಿ ಹೇಳಬೇಕಾದರೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಅವರ ಅಕೌಂಟನ್ನು ಆಡಿಟರ್ ಮುಖಾಂತರ ಆಡಿಟ್ ಮಾಡಿಸಿ ಅದನ್ನು ಲೆಜಿಸ್ಲೇಚರ್‌ಗೆ ಇಡುವುದು ಉತ್ತಮ ಎಂದು ಹೇಳಿದರು. ಅವರು ಹಾಗೆ ಹೇಳಿದ ಮೇಲೆ ಆ ಪ್ರಕಾರವಾಗಿ ಕ್ರಮ ತೆಗೆದುಕೊಂಡಿದ್ದೇವೆ. ಸರ್ಕಾರದಿಂದ ನೇಮಕ ಮಾಡಿರುವ ಆಡಿಟರ್‌ರವರು ಲೆಕ್ಕಪತ್ರಗಳನ್ನು ಪರಿಶೀಲಿಸುವ ಪದ್ಧತಿ ಮೊದಲಿತ್ತು. ಮೊದಲು ಕಂಟ್ರೋಲರ್ ಆಫ್ ಸ್ಟೇಟ್ ಅಕೌಂಟ್ಸ್ ಅಂತ ಏನಿತ್ತು, ಆದರೆ ಬದಲಾಗಿ ಈಗ Auditor appointed by the Government ಅನ್ನುವ ಪದವನ್ನು ಬದಲಾವಣೆ ಮಾಡಿ, ಈ ವಿಧೇಯಕದಲ್ಲಿ ಸೂಚನೆ ನೀಡಲಾಗಿದೆ.

ಎರಡನೆಯದು, ಸೆಕ್ಷನ್ ೩೩ರಲ್ಲಿ ಗೃಹಬಳಕೆಗೆ ಇರುವ ಕೆಲವು ಅಂಶಗಳನ್ನು ನಾವು ಯಾವ ಯಾವುದಕ್ಕೆ ಇದು ಅನ್ವಯವಾಗುವುದಿಲ್ಲ ಎನ್ನುವುದನ್ನು ಸೂಚನೆ ಮಾಡಿದ್ದೇವೆ. ಜೊತೆಗೆ domestic ಉಪಯೋಗಕ್ಕೆ ಬೇರೆ, ನಾನ್-ಡೊಮೆಸ್ಟಿಕ್ ಉಪಯೋಗಕ್ಕೆ ಬೇರೆ ದರವನ್ನು ನಾವು